# ಮುಳ್ಳಗೇರಿ







ಸಮುದ್ರ ತೀರದಲ್ಲಿ ವಿಹರಿಸುತ್ತಿದ್ದಾಗ ಮುಳ್ಳಿನ ಚೆಂಡಿನಂತಿರುವ ಈ ಜೀವಿಗಳನ್ನು ನೀವು ಕಂಡಿರುತ್ತೀರಿ. ಅವುಗಳು ಸಮುದ್ರದ ಅಲೆಗಳು ತಂದೆಸೆದಿರುವ ತಾಜ್ಯವೆಂದು ನೀವು ಉಪೇಕ್ಷಿಸಿದ್ದರೆ ಆಶ್ಚರ್ಯವೇನಿಲ್ಲ. ಇದು ತ್ಯಾಜ್ಯವಲ್ಲ, ಸಮುದ್ರಜೀವಿಗಳು.

ಸ್ಥಳೀಯವಾಗಿ ಮುಳ್ಳಗೇರಿ ಎಂದು ಕರೆಯಲ್ಪಡುವ ಈ ಸಮುದ್ರ ಜೀವಿಗಳನ್ನು ಆಂಗ್ಲ ಭಾಷೆಯಲ್ಲಿ 'ಸೀ ಅರ್ಚಿನ್' ಎಂದು ಕರೆಯುತ್ತಾರೆ. ಸಮುದ್ರ ತಟದಲ್ಲಿ ಮತ್ತು ಆಳದಲ್ಲೂ ಜೀವಿಸುವ ಇವುಗಳು ಸಾವಯವ ತಾಜ್ಯವನ್ನು, ನಕ್ಷತ್ರ ಮೀನುಗಳನ್ನು, ಪಾಚಿಯನ್ನು ತಿಂದು ಬದುಕುತ್ತವೆ. ಚೆಂಡಿನಂತಹ ದೇಹದ ಕೆಳಮಧ್ಯ ಭಾಗದಲ್ಲಿ ಇವುಗಳ ಬಾಯಿಯಿದೆ! ಇವುಗಳ ಕೆಲವು ಪ್ರಭೇದದಲ್ಲಿ ಕಾಣಬರುವ ದೇಹವನ್ನು ಸುತ್ತಿರುವ ಮುಳ್ಳಿನಂತಹ ಪೊಳ್ಳು ಎಲುಬುಗಳನ್ನು ಇವುಗಳು ನಡೆದಾಡಲು ಮತ್ತು ಆಹಾರವನ್ನು ಹಿಡಿಯಲು ಬಳಸುತ್ತವೆ.

ಜಗತ್ತಿನಾದ್ಯಂತ ಇವುಗಳ 700ಕ್ಕೂ ಹೆಚ್ಚು ಪ್ರಭೇದಗಳನ್ನು ಗುರುತಿಸಲಾಗಿದೆ. ಹವಳ ದಿಬ್ಬಗಳಿರುವೆಡೆ ಇವುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು. ಸಮುದ್ರ ತಾಜ್ಯವನ್ನು ತಿನ್ನುವುದರಿಂದ ಸಮುದ್ರ ತೀರದಲ್ಲಿನ ಸ್ವಚ್ಛತೆಗೆ ಇವುಗಳ ಲಭ್ಯತೆ ಅವಶ್ಯವಾಗಿದೆ.

ಕೆಂಪು ಅರ್ಚಿನ್ ಸುಮಾರು 200ಕ್ಕೂ ಹೆಚ್ಚು ವರ್ಷಗಳ ಕಾಲ ಬದುಕಿ ಜಗತ್ತಿನ ಅತಿಹೆಚ್ಚು ಕಾಲ ಬಾಳುವ ಜೀವಿಗಳ ಪಟ್ಟಿಗೆ ಸೇರುತ್ತದೆ. ಅರ್ಚಿನ್‌ಗಳನ್ನು ಕೆಲವು ಜಾತಿಯ ಮೀನುಗಳು ಮತ್ತು ಏಡಿಗಳು ತಿನ್ನುತ್ತವೆ. ಹಾಗಿದ್ದರೆ ಮನುಷ್ಯ? ಕೇಳೋದೇ ಬೇಡ– ಭಾರತದಲ್ಲಿ ಇವುಗಳನ್ನು ತಿನ್ನುವವರ ಸಂಖ್ಯೆ ಕಡಿಮೆಯಿದ್ದರೂ ಜಪಾನ್ ಜನರಿಗೆ ಇದೊಂದು ನೆಚ್ಚಿನ ಆಹಾರ. ಆದರೆ ಸಾಗರದಲ್ಲಿ ಮಾಲಿನ್ಯ ಹೆಚ್ಚಾಗಿರುವುದರಿಂದ ಇತ್ತೀಚೆಗೆ ಇವುಗಳ ಸಂಖ್ಯೆ ಬಹಳಷ್ಟು ಕ್ಷೀಣಿಸಿದೆ.

■ ಚಿತ್ರ– ಬರಹ: **ಸುನೀಲ ಬಾರ್ಕೂರ**